ಚಿತ್ರಕಾರರು ಅಂತ ಊಹಿಸ್ದೆ. ಇನ್ನು ಕಲಾಪ್ರೇಮ! ನೋಡಿ, ಆ ಮೂಲೆಯಲ್ಲಿ ಇರೋ ನಟರಾಜನ ವಿಗ್ರಹ. ಸುಮಾರು ಮುನ್ನೂರು ವರ್ಷ ಹಳೆಯದ್ದು. ಅದು ಯಾರಿಗೂ ಪಕ್ಕನೆ ಗೊತ್ತಾಗೋದಿಲ್ಲ. ಕಲೆಗಳಲ್ಲಿ ಆಸಕ್ತಿಯಿರೋರಿಗೆ ಮಾತ್ರ ಆ ವಿಗ್ರಹದ ವಿಶೇಷತೆ ಅರಿವಾಗೋದು. ಇದೊಂದು ಅಪರೂಪವಾದ ಪಾಲ ಪರಂಪರೆಯ ಹತ್ತು ಕೈಗಳ ನಟರಾಜ ವಿಗ್ರಹ. ನಿಮ್ಮ ದೃಷ್ಟಿ ಅದರ ಮೇಲೆ ಸರಿದಾಗ, ಅಲ್ಲೇ ಅದು ಸ್ಥಾಯಿಯಾಯಿತು. ನೀವು ಕಲಾಪ್ರೇಮಿ ಅನ್ನೋದಿಕ್ಕೆ ಬೇರೆ ಸಾಕ್ಷ್ಯ ಬೇಕೆ? ಹೇಳಿ, ನೀವು ಬಂದ ಸಮಾಚಾರ..."

ಅಷ್ಟರಲ್ಲಿ, ನಾನು ಮೂರು ಕಪ್‌ಗಳಲ್ಲಿ ಕಾಫಿ ತಂದು, ಎಲ್ಲರಿಗೆ ನೀಡಿದೆ.

"ಇವತ್ ಬೆಳಿಗ್ಗೆ ಒಂದು ವಿಚಿತ್ರ ಘಟನೆ ನಡೀತು. ಹತ್ತು ಗಂಟೆಯ ಸುಮಾರಿಗೆ ಒಬ್ಬ ಅಪರಿಚಿತ ನಮ್ ಮನೇಗ್ ಬಂದ. ತನ್ನನ್ನು ಸ್ಯಾಮುಯೆಲ್ ಎಂದು ಪರಿಚಯಿಸಿಕೊಂಡ ಆತ ತನಗೆ ಪ್ರಾಚೀನ ಕಲಾಕೃತಿಗಳಲ್ಲಿ ವಿಶೇಷ ಆಸಕ್ತಿಯಿದ್ದು, ತಾನು ಅಂತಹದನ್ನು ಖರೀದಿಸಲು ಉತ್ಸುಕನಾಗಿದ್ದೇನೆ ಎಂದು ಹೇಳ್ದ. ನನ್ನ ಬಳಿ ಅನೇಕ ಹಳೆಯ ಕಲಾಕೃತಿಗಳಿದ್ದಾವೆ. ಮನೆಯ ಮಹಡಿಯಿಡೀ ಅದಕ್ಕಾಗಿ ಮೀಸಲಿರಿಸಿದ್ದೇನೆ..."

"ತಡೀರಿ, ಅವ್ನು ನೋಡೋಕೆ ಹೇಗಿದ್ದ?"

"ಸುಮಾರು ಮೂವತ್ತರ ಆಸುಪಾಸಿನವ. ಮುಖದಲ್ಲಿ ಎದ್ದು ಕಾಣುವ ದಪ್ಪ ಮೀಸೆ. ಫ್ಲಾಟ್ ಕ್ಯಾಪ್ ಧರಿಸಿದ್ದ..."

"ನೀವು ಕಲಾಕೃತಿ ವ್ಯಾಪಾರಿಯಲ್ಲ, ಅಲ್ವೆ. ಅವ್ನಿಗೆ ನಿಮ್ ಬಳಿ ಕಲಾಕೃತಿ ಇರೋದು ಹೇಗೆ ಗೊತ್ತಾಯಿತಂತೆ?"

"ರಸ್ತೇಲಿ ಹೋಗ್ಬೇಕಾದ್ರೆ ಕಲಾಕೃತಿಗಳು ಕಂಡವು ಅಂತ ಹೇಳ್ದ. ಆದ್ರೆ ಮಹಡಿಯಿಂದ ರಸ್ತೆಗೆ ಅವು ಕಾಣಲು ಸಾಧ್ಯವೇ ಇಲ್ಲ!"

"ಓಹ್! ಹೌದೆ?... ಸರಿ, ಮುಂದುವರೆಸಿ."

"ನಾನು ಯಾವುದನ್ನೂ ಮಾರಾಟ ಮಾಡೋದಿಲ್ಲ ಅಂತ ಹೇಳ್ದೆ. ಅದಿಕ್ಕೆ ಅವ್ನು ತಾನೊಮ್ಮೆ ಕಲಾಕೃತಿಗಳನ್ನು ನೋಡಬಹುದೇ ಅಂತ ಕೇಳ್ದ. ನಾನು ಸಮ್ಮತಿಸಿದೆ. ಎರಡು ಕೊಠಡಿಗಳಲ್ಲಿ ವಿಗ್ರಹಗಳು, ಪಿಂಗಾಣಿ ವಸ್ತುಗಳು, ಇತ್ಯಾದಿ ಬಗೆ ಬಗೆಯ ವಸ್ತುಗಳಿವೆ. ಅದನ್ನೆಲ್ಲಾ ಕುತೂಹಲದಿಂದ ವೀಕ್ಷಿಸಿದ ಆತ ಕೊನೆಯಲ್ಲಿ ನಾಲ್ಕು ವಸ್ತುಗಳನ್ನು ಖರೀದಿಸಲು ಆಸಕ್ತಿ ತೋರಿಸಿದ. ಒಂದು ತಾಮ್ರದ ಹೂಜಿ, ಕಂಚಿನ ವಿಗ್ರಹ, ಮರದ ಪೆಟ್ಟಿಗೆ ಹಾಗೂ ಪಿಂಗಾಣಿಯ ಹೂದಾನಿ ಅವನು ಬಯಸಿದ ವಸ್ತುಗಳು."

"ಅದರಲ್ಲೇನು ವಿಚಿತ್ರ ಇದೆ, ತಂಗರಾಜು?"

"ವಿಚಿತ್ರ ಇರೋದು ಇನ್ನಷ್ಟೇ! ಆತ ಅವುಗಳಲ್ಲಿ ಮೂರು ವಸ್ತುಗಳಿಗೆ ಮಾತ್ರ ತಾನು ನೀಡಬಲ್ಲ ಬೆಲೆಯನ್ನು ಹೇಳಿದ, ಕಂಚಿನ ವಿಗ್ರಹವನ್ನು ಬಿಟ್ಟು. ಆ ಮೂರು ವಸ್ತುಗಳಲ್ಲಿ, ಹೂದಾನಿಗೆ ಆತ ಸೂಚಿಸಿದ ದರವು ಖರೀದಿ ಮಾಡಿದ ದರಕ್ಕಿಂತ ಸುಮಾರು ಎರಡು ಪಾಲಿದ್ದರೆ, ಉಳಿದೆರಡಕ್ಕೆ ಬೆಲೆಯು ಕೊಟ್ಟ ರೇಟಿಗಿಂತ ತುಸು ಕಮ್ಮಿಯಿತ್ತು! ಇನ್ನೊಂದು ತಮಾಷೆಯೆಂದರೆ, ಆ ಮೂರು ವಸ್ತುಗಳನ್ನು ನಾನು ಇತ್ತೀಚೆಗಷ್ಟೇ ಕಾವೇರಿ ಎಂಪೋರಿಯಂನಿಂದ ಖರೀದಿ ಮಾಡಿದ್ದೆ!! ಕಂಚಿನ ವಿಗ್ರಹವನ್ನು ತಂಜಾವೂರಿಂದ ತಂದಿದ್ದು. ಆತ ಕಾವೇರಿ ಎಂಪೋರಿಯಂನಿಂದ ಖರೀದಿಸಿದ ವಸ್ತುಗಳಿಗೆ ಮಾತ್ರ ಯಾಕೆ ದರ ಹೇಳ್ದ? ಹೂದಾನಿಗೆ ಮಾತ್ರ ಯಾಕೆ ದುಬಾರಿ ದರದ ಕೊಡುಗೆ ನೀಡ್ದ? ಇವು ನನ್ನ ತಲೆ ಕೊರೆದ ಪ್ರಶ್ನೆಗಳು."